# 1

ಗಂಟೆ ಎಂಟಾದರೂ ಸೂರ್ಯಕಂತದ ಉತ್ತರ ಅಮೆರಿಕೆಯ ಉರಿಬೇಸಗೆಯ ಮುಸ್ಸಂಜೆ. ಅಲುಗಿದರೆ ಪಶ್ಚಾತ್ತಾಪ ಪಡಬೇಕಾಗುವಷ್ಟು ಬಳಲಿದ್ದ ದೇಹವನ್ನು ಲಿವಿಂಗ್ ರೂಮಿನ ಸೋಫಾದ ಮೇಲೆ ಹರಡಿ, ನಿರಂಬಳವಾಗಿ ದಣಿವಾರಿಸಿಕೊಳ್ಳುತ್ತಿದ್ದ ಶಮಿಯನ್ನು ಅಪಾರ್ಟ್‌ಮೆಂಟಿನ ಬಾಗಿಲು ತೆರೆಯುವ ಕರ್ಕಶ ಸದ್ದು ಬೆಚ್ಚಿಬೀಳಿಸಿತು. ಗಾಬರಿಯಿಂದ ಎದ್ದು ಬೆಡ್ ರೂಮಿನತ್ತ ಓಡಿದ. ಸದ್ದು ಕೇಳಿದೊಡನೆ ಶಮಿ ಲಿವಿಂಗ್ ರೂಮಿನ ಫ್ರೆಂಚ್ ಡೋರನ್ನು ತೆಗೆದು ಹೊರಗೆ ಓಡಬೇಕಿತ್ತು. ಮನೆಯಿಂದ ಹೊರಬಿದ್ದರೆ ಸಣ್ಣ ಕೈತೋಟ, ಅಲ್ಲಿನ ಗೇಟ್ ತೆರೆದಾಕ್ಷಣ ಸಿಗುವಂತೆ ನಿಲ್ಲಿಸಿದ್ದ ಕಾರು, ಐದು ನಿಮಿಷಗಳಲ್ಲಿ ಇಡೀ ನೆರೆಹೊರೆಯನ್ನು ಬಿಟ್ಟು ಹೋಗಬಹುದಿತ್ತು. ಅದಕ್ಕೆ ಅನುಕೂಲವಾಗುವಂತೆ ಶಮಿಯ ಕೈ ಚೀಲ ಫ್ರೆಂಚ್ ಡೋರಿನ ಹತ್ತಿರ ಇರಬೇಕಿತ್ತು. ಆದರೆ ಅದು ಬೆಡ್‌ರೂಮಿನಲ್ಲಿತ್ತು. ಈ ಸಣ್ಣ ಹುಳುಕು ಇಡೀ ಯೋಜನೆಯ ಹಳಿತಪ್ಪಿಸಿತು. ಕೈಚೀಲ ಎತ್ತುವಾಗ ಅದರಲ್ಲಿ ತುರುಕಿದ್ದ ಅವನ ಟೋಪಿ ಮತ್ತು ಜಾಕೆಟುಗಳು ಮೊಂಡುಮಾಡುವ ಮಕ್ಕಳಂತೆ ತಪ್ಪಿಸಿಕೊಂಡು ಕೆಳಬಿದ್ದವು. ವರುಷಗಳಿಂದ ಅವನ ನಿಶಾನಿಯಂತೆ ಮೆರೆದಿದ್ದ ಅವನ್ನು ಅಲ್ಲಿಯೇ ಬಿಟ್ಟು ಹೋಗುವ ಹಾಗಿರಲಿಲ್ಲ. ಹೆಕ್ಕಿ ಚೀಲದೊಳಕ್ಕೆ ವಾಪಸು ತುರುಕಿ ಓಡಬೇಕು ಎನ್ನುವಷ್ಟರಲ್ಲಿ ಬಾಗಿಲು ತೆರೆದು ಬಂದಾತ ಆಗಲೇ ಹಾಲ್ ಮಧ್ಯಕ್ಕೆ ತಲುಪಿದ್ದ. ಬಂದವನ ಕಣ್ತಪ್ಪಿಸಿ ಹೊರಹೋಗುವ ಸಾಧ್ಯತೆ ಇರಲಿಲ್ಲ. ಅವನ ಮುಂದೆಯೇ ಓಡುವುದಾದರೆ ಅವಸರವೇಕೆ? ತನ್ನನ್ನೇ ಬಯ್ದುಕೊಳ್ಳುತ್ತ ಶಮಿ ಬೆಡ್ ರೂಮು ಸೇರಿದ.

ಈ ವಿಷಯದಲ್ಲಿ ಕಾರ್ಲಿತೋ ಮಹಾ ಕಿಲಾಡಿ. ಎಂದೂ ಮೈಮರೆತವನೇ ಅಲ್ಲ. ವರುಷಗಳಿಂದ ಬ್ಯಾಂಕ್ ವಶಪಡಿಸಿಕೊಂಡಿದ್ದ ಮನೆಗಳಲ್ಲಿ ರಾತ್ರಿಗಳನ್ನು ಬಿಟ್ಟಿಯಾಗಿ, ಬೇನಾಮಿಯಾಗಿ ಕಳೆಯುತ್ತಿದ್ದರೂ ಒಮ್ಮೆಯೂ ಸಿಕ್ಕಿಹಾಕಿಕೊಂಡವನಲ್ಲ. ಈ ಗಳಿಗೆ ಬರುತ್ತದೆಂದು ಗೊತ್ತಿದ್ದವನ ಹಾಗೆ, ಆ ಮನೆಗೆ ಕರೆತಂದ ದಿನವೇ ಕಾರ್ಲಿತೋ, 'ಅಕಸ್ಮಾತ್ ಓನರ್ ಬಂದು ಕುಳಿತೇಬಿಟ್ಟರೂ ಒಂದು ಕ್ಷಣವೂ ಇಲ್ಲಿರಬೇಡ. ತಲೆಯೆತ್ತಿ ನೋಡದೇ ಓಡು' ಎಂದು ತಾಕೀತು ಮಾಡಿದ್ದ. ಆದರೆ ಈಗ, ಓನರ್ (ಬಂದವ ಓನರ್ ಎನ್ನುವುದರಲ್ಲಿ ಶಮಿಗೆ ಸಂಶಯವಿರಲಿಲ್ಲ. ಇಂತಹ ಹೊತ್ತಲ್ಲದ ಹೊತ್ತಿನಲ್ಲಿ ಬಂದು, ಅವಸರವಿಲ್ಲದೇ ಕುಳಿತುಕೊಳ್ಳುವವ ಬರೀ ಮಾಲೀಕನಷ್ಟೇ ಆಗಿರಲು ಸಾಧ್ಯ). ಸೋಫಾದ ಮೇಲೆ ಧಂಡಿಯಾಗಿ ಕುಳಿತುಕೊಂಡಿರುವಾಗ ತಪ್ಪಿಸಿಕೊಳ್ಳುವುದು ಹೇಗೆ? ನಾಳೆ ಎಲ್ಲೋ ಒಂದು ಕಡೆ ಎದುರಿಗೆ ಸಿಕ್ಕರೆ ಫಜೀತಿಯಾಗಿಬಿಡುತ್ತದೆ. ಶಮಿಗೆ ಬೆಡ್ ರೂಮಿನಿಂದ ಹೊರಬರಲಾಗಲಿಲ್ಲ.

ಕಾರ್ಲಿತೋಗೆ ಜೀವ ಉಳಿಸಿಕೊಳ್ಳುವುದು ಮುಖ್ಯ. ಎಲ್ಲ ಸಂಗತಿಗಳನ್ನು ಆ ಕೋನದಿಂದಲೇ ಗ್ರಹಿಸಿ, ಅವಕ್ಕೊಂದು ಸಿದ್ಧಾಂತ ಮಂಡಿಸುವುದು ಕಾರ್ಲಿತೋನ ಸ್ವಭಾವ. ಅವನ ಪ್ರಕಾರ:

"ಓನರ್ ಮನೆ ಸೇರಿದ ಮೇಲೂ ಅಲ್ಲಿಯೇ ಇದ್ದರೆ, ಬಂದವನನ್ನು ತಲೆಯೆತ್ತಿ ನೋಡಿದರೆ,